■ ಹನಿ

# ಚಿರಂಜೀವಿಯ ಕಷ್ಟ

ಶಿವಪ್ರಸಾದ್ ಕೊನಿಡಾಲ ಯಾನೆ ಚಿರಂಜೀವಿ ಮತ್ತೆ ಸುದ್ದಿಯಲ್ಲಿದ್ದಾರೆ. ಈ ಸಲ ಮತ್ತೆ ಮಗಳ ಸಲುವಾಗಿ! ಮುದ್ದಿನಿಂದ ಸಾಕಿದ ಕೊನೇ ಮಗಳು ಸೃಜಾ ಮೂರೂವರೆ ವರ್ಷಗಳ ಹಿಂದೆಯೂ ಹೀಗೆ ಅಪ್ಪನನ್ನು ಸಾರ್ವಜನಿಕ ಕಟಕಟೆಯಲ್ಲಿ ನಿಲ್ಲಿಸಿದ್ದಳು. ಶಿರೀಸ್



ಭಾರಧ್ವಾಜ್ ಎಂಬ ಪ್ರಿಯತಮನನ್ನು ಹೈದರಾಬಾದ್‌ನ ಆರ್ಯ ಸಮಾಜದಲ್ಲಿ ಗುಟ್ಟಾಗಿ ಮದುವೆಯಾಗಿ, ಆ ಬಳಿಕ ತಂದೆಯಿಂದ ಪ್ರಾಣ ಬೆದರಿಕೆಯಿದೆ ಎಂಬ ಸುದ್ದಿ ಹಬ್ಬಿಸಿ ದೆಹಲಿಗೆ ಓಡಿಹೋಗಿದ್ದಳು ಸೃಜಾ. ಹೈಕೋರ್ಟಿನಲ್ಲಿ ನವದಂಪತಿ ರಕ್ಷಣೆ ಕೋರಿ ಅರ್ಜಿ ಹಾಕಿದ್ದರು. ಸಮಾಜದ ಕಣ್ಣಲ್ಲಿ ಆಗ ಚಿರಂಜೀವಿ ವಿಲ್ಲನ್ ಆಗಿ ಕಂಡದ್ದು ಸುಳ್ಳಲ್ಲ. 'ನಟಿಸಿದ ಬಹುತೇಕ ಸಿನಿಮಾಗಳಲ್ಲಿ ಪ್ರೀತಿಸಿದವಳನ್ನು ಮದುವೆಯಾಗಲು ಹರಸಾಹಸ ಮಾಡಿ ಗೆದ್ದ ಚಿರಂಜೀವಿ, ನಿಜಜೀವನದಲ್ಲಿ ಮಗಳ ಪ್ರೀತಿಗೆ ಅಡ್ಡಿ ಆಗಿರುವುದು ಏಕೆ..' ಎಂಬ ಪ್ರಶ್ನೆ ಹಲವರಿಗೆ ಆಗ ಕಾಡಿತ್ತು. ಚಿರಂಜೀವಿ ಏನೇ ಹೇಳಿದರೂ ಜನ ಆಗ ನಂಬುವ ಸ್ಥಿತಿಯಲ್ಲಿ ಇರಲಿಲ್ಲ.

ಈಗ ಮೂರೂವರೆ ವರ್ಷಗಳ ಬಳಿಕ ಕಾಲಚಕ್ರ ಒಂದು ಸುತ್ತು ಬಂದಿದೆ. ಈಗ ಮತ್ತೆ ಸೃಜಾ ಎರಡೂವರೆ ವರ್ಷದ ಪುಟ್ಟ ಮಗಳ ಜತೆ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿದ್ದಾಳೆ. ಆದರೆ ಈ ಬಾರಿ ಗಂಡನ ವಿರುದ್ಧ! 'ಗಂಡ, ಅತ್ತೆ ಹಣಕ್ಕಾಗಿ ಸಿಕ್ಕಾಪಟ್ಟೆ ಕಷ್ಟ ಕೊಡುತ್ತಿದ್ದಾರೆ. ಕೋಟಿಗಟ್ಟಳೆ ಹಣ, ಆಭರಣ ಕೊಟ್ಟ ಬಳಿಕವೂ ಈಗ ಮತ್ತೆ ಕೋಟಿ ತಗೊಂಡು ಬಾ. ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡಬೇಕೆಂದು ಗಂಡ ಹಿಂಸೆ ಕೊಡುತ್ತಿದ್ದಾನೆ' ಎನ್ನುವುದು ಸೃಜಾ ದೂರು. ಸದ್ಯಕ್ಕೆ ಆಕೆಗೆ ಅಪ್ಪನೇ ಆಪದ್ಬಾಂಧವ. 'ಮದುವೆಯಾಗುವಾಗಲೇ ಹೇಳಿದ್ದೆ– ಆ ಹುಡುಗನ ಕ್ಯಾರೆಕ್ಟರ್ ಸರಿ ಇಲ್ಲ ಅಂತ. 2002ರಲ್ಲಿ ಮೈನರ್ ಹುಡುಗಿಯೊಬ್ಬಳನ್ನು ಅಪಹರಿಸಿದ ಕೇಸ್ ಆತನ ಮೇಲಿತ್ತು. ಮಗಳು ಮಾತು ಕೇಳಲಿಲ್ಲ' ಎಂದು ಚಿರಂಜೀವಿ ವ್ಯಥೆ ಪಟ್ಟಿದ್ದಾರೆ.

ಕಷ್ಟ ಪಟ್ಟು ಹೀರೊ ಆದ, ಶ್ರಮದಿಂದ ಮೆಗಾಸ್ಟಾರ್ ಆದ, 'ಪ್ರಜಾರಾಜ್ಯಂ' ಪಕ್ಷ ಕಟ್ಟಿ, ಚುನಾವಣೆಯಲ್ಲಿ ಏಗಿ ಹೈರಾಣಾಗಿ, ಈಗ ಕಾಂಗ್ರೆಸ್‌ನಲ್ಲಿ ಪಕ್ಷವನ್ನು ವಿಲೀನಗೊಳಿಸಿರುವ ಚಿರಂಜೀವಿ ಇಳಿಗಾಲದಲ್ಲಿ ನೆಮ್ಮದಿಯ ದಿನಗಳನ್ನು ಹುಡುಕುತ್ತಿರುವಂತಿದೆ. ಸದ್ಯಕ್ಕೆ ಅಳಿಯನ ಜತೆ ಸಂಘರ್ಷಕ್ಕೆ ಹೋಗದೆ, ರಾಜಿ ಮೂಲಕ ಪ್ರಕರಣ ಇತ್ಯರ್ಥಗೊಳಿಸುವ ಇರಾದೆ ವ್ಯಕ್ತಪಡಿಸಿದ್ದಾರೆ. 'ಬೆಳ್ಳಿತೆರೆಯಲ್ಲಿ ಹೀರೊ ಆಗುವುದು ಸುಲಭ; ನಿಜಜೀವನದ ಅಪ್ಪನ ಪಾತ್ರ ಕಷ್ಟ' ಅನ್ನೋದು ಚಿರಂಜೀವಿಯ ಅನುಭವದ ಮಾತು.



# ಕುಖ್ಯಾತ ಖಾನ್

ಸೈಯದ್ ಮೊಹಮ್ಮದ್ ಹಸನ್ ಅಲಿ ಖಾನ್ ಎನ್ನುವುದು ಆತನ ಹೆಸರು. ವಯಸ್ಸು 56 ವರ್ಷ. ಹುಟ್ಟಿದ್ದು ಹೈದರಾಬಾದ್‌ನಲ್ಲಿ. ಮೊದಲ ಹೆಂಡತಿ ಮೆಹಬೂಬಾಗೆ ಸೋಡಾ ಚೀಟಿ ಕೊಟ್ಟು ಎರಡನೆ ಹೆಂಡತಿ ರೀಮಾ ಜತೆ ಸುಖವಾಗಿದ್ದಾನೆ. ಆದರೆ ಹಾಗೆ ಸುಖವಾಗಿರಲು ಈಗ ಇನ್‌ಕಮ್‌ಟ್ಯಾಕ್ಸ್‌ನವರು ಬಿಡುತ್ತಿಲ್ಲ. 'ಭಾರತ ಸರಕಾರಕ್ಕೆ ಈ ಖಾನ್ 50 ಸಾವಿರ ಕೋಟಿ ರೂಪಾಯಿ ತೆರಿಗೆ ಬಾಕಿ ಉಳಿಸಿಕೊಂಡಿದ್ದಾನೆ' ಎನ್ನುವುದು ಈಗ ಅಧಿಕಾರಿಗಳ ಹೇಳಿಕೆ. ಇವರ ಹೇಳಿಕೆ ನೋಡಿದರೆ, 'ಈವರೆಗೆ ಅಧಿಕಾರಿಗಳೇನು ಕತ್ತೆ ಕಾಯುತ್ತಿದ್ದರೆ..?' ಎಂದು ಕೇಳುವ ಮನಸ್ಸಾಗುತ್ತದೆ. ಬಂಧನಕ್ಕೆ ಒಳಗಾಗಿ ಹೈಕೋರ್ಟಿನಲ್ಲಿ ಜಾಮೀನು ಪಡೆದ ಹಸನ್ ಅಲಿಯನ್ನು ಮತ್ತೆ ಸುಪ್ರೀಂಕೋರ್ಟ್ ಲಾಕಪ್‌ಗೆ ತಳ್ಳಿದೆ. ತೆರಿಗೆ ಇಲಾಖೆ ಕಾನೂನು ಹೋರಾಟದಲ್ಲಿ ಬ್ಯುಸಿಯಾಗಿದೆ.

ಹಸನ್ ಅಲಿಯ ಒಟ್ಟು ಆಸ್ತಿ ಎಷ್ಟು ಎನ್ನುವ ಲೆಕ್ಕ ಸರಕಾರಕ್ಕೇ ಸಿಕ್ಕಿಲ್ಲ. ಒಬ್ಬೊಬ್ಬರೂ ಒಂದೊಂದು ಅಂಕಿ ಸಂಖ್ಯೆ ಹೇಳುತ್ತಿದ್ದಾರೆ. ಸ್ವಿಸ್ ಬ್ಯಾಂಕ್‌ನಲ್ಲಿ ಆತ ಕೋಟಿಗಟ್ಟಳೆ ಹಣ ಇಟ್ಟಿದ್ದಾನೆ ಎನ್ನುವುದು ಸುದ್ದಿ. ಕೇಂದ್ರದ ಅರ್ಥ ಸಚಿವರು, 'ಸ್ವಿಸ್ ಬ್ಯಾಂಕಿನಲ್ಲಿ ಆತನದ್ದು ಮೂರು ಅಕೌಂಟ್ ಇದೆ. ಅದಕ್ಕೆ ಕೋಟ್ಯಂತರ ಡಾಲರ್ ಹಣ ಹಾಕಿದ್ದು ನಿಜ. ಆದರೆ ನಾವು ಚೆಕ್ ಮಾಡಿದಾಗ ಅಲ್ಲಿಂದ ಆತನ ಹಣ ತೆಗೆದಿದ್ದಾನೆ. ಬೇರೆ ಎಲ್ಲಿ ಇಟ್ಟಿದ್ದಾನೋ ಗೊತ್ತಾಗುತ್ತಿಲ್ಲ' ಎಂದಿದ್ದಾರೆ! 'ಕಿವಿ ಮೇಲೆ ಹೂ' ಎಂದರೆ ಇದೇ ಇರಬಹುದೆ?

ಹೈದಾರಾಬಾದ್‌ನಲ್ಲಿ ಪಿಯುಸಿ ಓದಿದ ಬಳಿಕ ಬಿಸಿನೆಸ್‌ಗೆ ಇಳಿದ ಹಸನ್ ಅಲಿ, ಕಾರು ಬಾಡಿಗೆಗೆ ಇಟ್ಟುಕೊಂಡಿದ್ದ. ಅದು ಬರಕತ್ತಾಗದೆ, ದುಬೈಯಲ್ಲಿ ಗುಜರಿ ಬಿಸಿನೆಸ್ ಶುರು ಮಾಡಿದ. ಕುವೈತ್‌ನಲ್ಲಿ ಆಭರಣ ಮಳಿಗೆ ತೆರೆದ. ಈ ಮಧ್ಯೆ ಈತನ ವಿರುದ್ಧ 12 ಚೀಟಿಂಗ್ ಕೇಸುಗಳು ದಾಖಲಾಗಿವೆ. ಎಸ್‌ಬಿಐ ಕೂಡಾ ಕೇಸು ಹಾಕಿದೆ. ಬಳಿಕ ಎರಡನೆ ಮದುವೆಯಾಗಿ ಪುಣೆಯಲ್ಲಿ ಸೆಟ್ಲ್ ಆಗಿ, ರೇಸ್ ಕುದುರೆ ಸಾಕಿದ. ಮುಂಬೈ ರೇಸ್‌ಕೋರ್ಸ್‌ಗೆ ಈತ ಕಾಯಂ ಗಿರಾಕಿ. ಆದರೆ ಅಲ್ಲೂ ಯಾರ ಜತೆಗೂ ಸಲಿಗೆ ಇರಲಿಲ್ಲವಂತೆ. 'ನನ್ನದು ಗುಜರಿ ವ್ಯಾಪಾರ. ವಾರ್ಷಿಕ 30 ಲಕ್ಷ ರೂಪಾಯಿ ವರಮಾನ' ಎನ್ನುವುದು ಆತನ ಹೇಳಿಕೆ. ಹಾಗಿದ್ದರೆ ಅಷ್ಟೊಂದು ದುಡ್ಡು ಎಲ್ಲಿಂದ ಬಂತು?

'ಹಲವು ವರ್ಷಗಳಿಂದ ತೆರಿಗೆ ಕಟ್ಟಿಲ್ಲ. ಶೇಕಡಾ 200ರಷ್ಟು ದಂಡ ಹಾಕಿದ್ದೇವೆ. 2,10,000 ಕೋಟಿ ರೂಪಾಯಿ ತೆರಿಗೆ ಕಟ್ಟು' ಎಂದು ಐಟಿ ಅಧಿಕಾರಿಗಳು ದುಂಬಾಲು ಬಿದ್ದಿದ್ದಾರೆ. ಭಾರತದಲ್ಲಿ ಮಾತ್ರ ಹೀಗೆ ಹವಾಲಾ ವಂಚಕನೊಬ್ಬ ರಾಜಾರೋಷವಾಗಿ ತಿರುಗಾಡುವುದು ಸಾಧ್ಯವೆಂದು ಕಾಣುತ್ತದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65